ಒಬ್ಬ ಮಾನ್ಯ ಸದಸ್ಯರು : 7ನೇ ತಾರೀಖಿನಿಂದ ಧರಣಿ ನಡೆಯುತ್ತಿದೆ. ಸರ್ಕಾರ ಇದರ ಬಗ್ಗೆ ಗಮನ ಹರಿಸುತ್ತದೆಯೇ ಎನ್ನುವುದನ್ನು ಹೇಳಬೇಕಾಗಿದೆ. ಏಕೆಂದರೆ, ರಾಜ್ಯಾದ್ಯಂತ ಸಮಸ್ಯೆ ಇದೆ.

ಅಧ್ಯಕ್ಷರು : ತಮಗೆಲ್ಲರಿಗೂ ಗೊತ್ತಿದೆ, 20ನೇ ತಾರಿಖಿನಿಂದ ಬಿಡುವು ಇಲ್ಲದೇ ಕೆಲಸ ಮಾಡುತ್ತಿದ್ದೇವೆ. ಎಲ್ಲಾ ವಿಚಾರಗಳನ್ನೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಇವತ್ತು ಕಡೆಯ ದಿವಸ, ವಿಶೇಷವಾಗಿ ನೀರಾವರಿ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ರಾಜ್ಯದಲ್ಲಿ ಇನ್ನೂ ಅನೇಕ ಸಮಸ್ಯೆಗಳು ಇವೆ. ಎಲ್ಲವನ್ನೂ ಇವತ್ತೇ ಚರ್ಚೆ ಮಾಡುತ್ತೀರಾ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಸರಿಯಲ್ಲ. ಏಕೆಂದರೆ,

ಒಬ್ಬ ಮಾನ್ಯ ಸದಸ್ಯರು : ಸೀನಿಯಸ್ಸ್‌ರೇ ಮಾತನಾಡುತ್ತಾರೆ. ನಾವು ಏನಾದರೂ ಮಾತನಾಡಿದರೆ ತಪ್ಪೆ. ಅಧ್ಯಕ್ಷರೇ ತಾವೇ ಹೇಳಿ. ನಾವು ಏನಾದರೂ ಹೇಳೋಣವೆಂದರೆ, ಅವರೇ ಎದ್ದು ನಿಲ್ಲುತ್ತಾರೆ. ಹೀಗಾದರೆ, ನಾವೇನು ಮಾಡೋಣ.

ಅಧ್ಯಕ್ಷರು : ನೀವೂ ಇನ್ನು ಮುಂದೆ ಸೋಲದೇ ಗೆದ್ದು ಬಂದು, ಸೀನಿಯರ್ಸ್ ಆಗಿ.

ಶ್ರೀ ಸಿ.ಎಚ್. ವಿಜಯಶಂಕರ : ಕಾವೇರಿ ವಿಚಾರ ಪ್ರಸ್ತಾಪ ಮಾಡುವ ಬಗ್ಗೆ ಗಮನ ಕೊಡಬೇಕು. ಕಾವೇರಿ ವಿಚಾರದಲ್ಲಿ ಸಂಬಂಧಪಟ್ಟ ಶಾಸಕರ ಸಭೆಯನ್ನು ಕರೆಯತಕ್ಕ ಕೆಲಸವೂ ಮುಂದೆ ಹೋಗಿದೆ. ಟ್ರಿಬ್ಯುನಲ್ ವಿಚಾರ ಏನಾಯಿತ್ತು, ಅಚ್ಚುಕಟ್ಟಿಗೆ ಸಂಬಂಧಪಟ್ಟ ಶಾಸಕರಿಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಕಾವೇರಿ ವಿಚಾರದಲ್ಲಿ ಸರ್ಕಾರದ ಸ್ಪಷ್ಟ ನಿಲುವೇನು?

ಅಧ್ಯಕ್ಷರು : ಕಾವೇರಿ ನೀರಾವರಿಗೆ ಒಳಪಡುವುದಿಲ್ಲವೆ? ದಯಮಾಡಿ ಕುಳಿತುಕೊಳ್ಳಿ. ಇಷ್ಟು ತಾಳ್ಮೆಯಿಂದ ಇರುವ ಮನುಷ್ಯನನ್ನೂ ಪರೀಕ್ಷೆ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ತಾಳ್ಮೆ ನೋಡಿ ನನಗೆ ಸುಸ್ತಾಗಿದೆ. ತಾವು ದಯಮಾಡಿ ತಪ್ಪು ತಿಳಿದುಕೊಳ್ಳಬಾರದು.

ಅಧ್ಯಕ್ಷರು : ನಿಗದಿತ ಕಾರ್ಯಕ್ರಮ ಇಟ್ಟುಕೊಂಡು, ಅದನ್ನು ಬಿಟ್ಟು ಊರೆಲ್ಲಾ ಸುತ್ತಿಕೊಂಡಿದ್ದರೆ ಏನು ಪ್ರಯೋಜನ?

5) ಅಕಾಡೆಮಿಗಳಿಗೆ ಅಧ್ಯಕ್ಷರುಗಳ ನೇಮಕಾತಿಯಲ್ಲಿ ವಿಳಂಬ

* ಶ್ರೀ ವಾಟಾಳ್ ನಾಗರಾಜ್: ಇವತ್ತು ಅಧಿವೇಶನದ ಕೊನೆಯ ದಿವಸ. ಏನಾದರೂ ಕೇಳುವುಕ್ಕೆ ದಯಮಾಡಿ ಅವಕಾಶ ಕೊಡಬೇಕು. ಅತಿ ಮುಖ್ಯವಾಗಿ, ತಮ್ಮ ಹತ್ತಿರ ಬಂದು ಕೇಳಿಕೊಂಡಿದ್ದೇನೆ. ನಾನು ಪ್ರಸ್ತಾಪ ಮಾಡುವಂಥಾದ್ದು, ಅನೇಕ ಕನ್ನಡ ಅಕಾಡೆಮಿಗಳನ್ನು ರದ್ದು ಮಾಡಿದ್ದಾರೆ. ಇವುಗಳಿಗೆ ಅಧ್ಯಕ್ಷರನ್ನು

ಇನ್ನೂ ನೇಮಕ ಮಾಡಿಲ್ಲ. ಈ ಬಗ್ಗೆ ಸುಮಾರು ಮೂರು ತಿಂಗಳಾದರೂ ಅಲ್ಲಿ ಏನು ಕೆಲಸಕಾರ್ಯಗಳಾಗಬೇಕು, ಯಾವರೀತಿ ನಡೆಯಬೇಕು ಎನ್ನತಕ್ಕಂಥಾದ್ದರ ಬಗ್ಗೆ ವ್ಯವಸ್ಥಿತವಾಗಿ ಆಗುತ್ತಾ ಇಲ್ಲ. ಅಧ್ಯಕ್ಷರು ಇದ್ದು, ಅದಕ್ಕೆ ಒಂದು ಸಮಿತಿ ಇದ್ದರೆ ಅದು ಯೋಜನಾ ಬದ್ಧವಾಗಿ ವಿಚಾರಪೂರಕವಾಗಿ ಸಭೆಗಳನ್ನು ನಡೆಸಿ ಕಾರ್ಯಕ್ರಮಗಳನ್ನು ನಡೆಸಬಹುದಿತ್ತು. ಈಗ ಅಲ್ಲಿರತಕ್ಕಂಥ ಅಧ್ಯಕ್ಷರುಗಳನ್ನೆಲ್ಲಾ ಬದಲಾವಣೆ ಮಾಡಿ, ಹೊಸ ಅಧ್ಯಕ್ಷರುಗಳನ್ನು ನೇಮಕ ಮಾಡಲಿಲ್ಲ ಸರ್ಕಾರ ಯಾರನ್ನಾದರೂ ನೇಮಕ ಮಾಡಲಿ ಅಧ್ಯಕ್ಷರುಗಳನ್ನು ನೇಮಕ ಮಾಡುವಂಥಾದ್ದು ಡಿಸೆಂಬರ್ ತಿಂಗಳಿಂದ ಇಲ್ಲಿಯವರೆಗೂ ಅಕಾಡೆಮಿಗಳ ಅಧ್ಯಕ್ಷರ ಪೀಠಗಳು ಖಾಲಿ ಇವೆ. ಅತಿ ಮುಖ್ಯವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಹೊರಗಡೆ ಕಳುಹಿಸಿ ಬೀಗ ಹಾಕಿದ್ದಾರೆ ನಾನು ಈ ಬಗ್ಗೆ ಸರ್ಕಾರಕ್ಕೆ ಅನೇಕ ಭಾರಿ ಮನವಿ ಸಲ್ಲಿಸಿದೆ. ನನ್ನ ಯಾವ ಮನವಿ ಕೂಡ ಸರ್ಕಾರದ ಗಮನಕ್ಕೆ ಬರಲಿಲ್ಲ. ಈಗಲೂ ಕೂಡ ನನ್ನ ಮನವಿ ಅವರ ಗಮನಕ್ಕೆ ಬರಲಿಲ್ಲ ಯಾರೋ ಮಾತನಾಡುತ್ತಿದ್ದಾರೆ. ನನ್ನ ಮನವಿ ಈಗಲೂ ಕೂಡ ಅವರ ಕಿವಿಗೆ ತಲುಪುತ್ತಿಲ್ಲ. ಆದ್ದರಿಂದ ನನಗೆ ಬೇರೆ ವಿಧಿಯೇ ಇಲ್ಲ. ಒಂದು ಮಾತು ಹೇಳುತ್ತೇನೆ ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೆಲಸ ಮಾಡುತ್ತಿತ್ತು. ಪ್ರತಿ ಒಂದು ವರ್ಷ ಕನ್ನಡ ಜಾಗೃತಿ ವರ್ಷ ಎಂದು ಆಚರಣೆ ಮಾಡಿದರು. ಮತ್ತು ವಿಧಾನಸೌಧದಲ್ಲಿ 4 ಕಡೆಗೂ ಬಾಗಿಲುಗಳಲ್ಲಿ ಏಪ್ರಿಲ್ ಒಂದನೇ ತಾರೀಖಿನಿಂದ ಕನ್ನಡ ಆಡಳಿತ ಭಾಷೆ ಅಂತ ಹೇಳಿ ಎಲ್ಲಾ ರೀತಿಯಿಂದ ವ್ಯವಸ್ಥಿತವಾಗಿ ಉತ್ಸಾಹವಾಗಿ ಅಭಿಮಾನದಿಂದ ನಡೆಯುತ್ತಿತ್ತು. ಈಗ ಅವು ಯಾವುವೂ ಇಲ್ಲ. ವಿಧಾನ ಸೌಧದಲ್ಲಿದ್ದ ನಾಮಫಲಕವನ್ನು ಕಿತ್ತಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಸಂಪೂರ್ಣವಾಗಿ ಮುಚ್ಚಿದ್ದಾರೆ, ಅಕಾಡೆಮಿ ಅಧ್ಯಕ್ಷರುಗಳನ್ನು ಬದಲಾವಣೆ ಮಾಡಿದ್ದಾರೆ. ಆಡಳಿತ ಭಾಷೆಯ ಬಗ್ಗೆ ನಾನು ಇಲ್ಲಿ ತೀವ್ರವಾಗಿ ಹೇಳುವುದಕ್ಕೆ ಹೋದರೆ ನೋವಾಗುತ್ತದೆ. ನಾವು ಎಷ್ಟು ಸಾರಿ ಹೇಳಿದರೂ ಕೂಡ ಒತ್ತಾಯ ಮಾಡಿದರು ಕೂಡ ಇಲ್ಲ. ಡೆಲ್ಲಿಯಲ್ಲಿ ಕನ್ನಡ ಭವನ ಕಟ್ಟುತ್ತೇವೆ ಅಂತ ಹಿಂದಿನ ಸರ್ಕಾರ ಕ್ರಮ ಕೈಗೊಂಡಿತ್ತು ಆದರೆ ಈ ಸರ್ಕಾರ ತಮ್ಮ ರಾಜ್ಯಪಾಲರ ಭಾಷಣದಲ್ಲಿ ಆಗಲಿ ಆಯವ್ಯಯ ಭಾಷಣದಲ್ಲಿ ಆಗಲಿ ಈ ಬಗ್ಗೆ ಒಂದು ಚಕಾರವನ್ನು ಕೂಡ ಎತ್ತಿಲ್ಲ. ಎಲ್ಲಿಗೆ ಹೋಗಿ ತಲುಪಬೇಕು ಹೇಳಿ ನಾವು. ಆದ್ದರಿಂದ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ತಾವು ಇದನ್ನು ತಪ್ಪು ತಿಳಿದುಕೊಳ್ಳಬಾರದು, ಬಹಳ ನೋವಾಗುತ್ತದೆ. ಕನ್ನಡಕ್ಕೆ ಇವರು ತೋರಿಸುತ್ತಿರುವಂತಹ ಧೋರಣೆಯನ್ನು ಅನಾಧರಣೆ ಮತ್ತು ಇವರು ಮಾಡುತ್ತಿರುವಂತಹ ನೀತಿಯ ಬಗ್ಗೆ ನಾನು ಇಲ್ಲಿ ಸರ್ಕಾರದ ನೀತಿಯನ್ನು ವಿರೋಧಿಸಿ ಧರಣಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ ಸ್ವಾಮಿ ನಾನು ನಿಮ್ಮ ಮಾತನ್ನು ಕೇಳುತ್ತೇನೆ ಆದರೆ ಇವತ್ತು ಎಲ್ಲೂ ಅಕಾಡೆಮಿಗಳ ಅಧ್ಯಕ್ಷರು ಇಲ್ಲ. ಕಳೆದ 3 ತಿಂಗಳಿಂದ ಅಧ್ಯಕ್ಷರು ಇದ್ದಿದ್ದರೆ ಎಷ್ಟೋ ಕೆಲಸ ಆಗುತ್ತಿತ್ತು. ಯಾರನ್ನಾದರೂ ಮಾಡಿ. ಏಕೆ ಮಾಡಲಿಲ್ಲ? ಅದಕ್ಕೆ ರಾಜಕಾರಣ ತರಬಾರದಾಗಿತ್ತು. ತಾವು ಇಲ್ಲಿ ರಾಜಕೀಯೇತರರನ್ನೇ ಹಾಕಿರುತ್ತೀರಿ ಸಾಹಿತಿಗಳನ್ನು ಹಾಕಿರುತ್ತೀರಿ. ಕವಿಗಳನ್ನು ಹಾಕಿರುತ್ತೀರಿ ಬೇರೆ ಬೇರೆಯವನ್ನು

ಹಾಕಿರುತ್ತೀರಿ. ಈ ಜನಗಳನ್ನು ಹೊರಗೆ ಕಳುಹಿಸಿ ನೀವು ಅಲ್ಲಿ ಬೀಗ ಹಾಕಿದ್ದೀರಿ ಮತ್ತು ವಿಧಾನ ಸೌಧದಲ್ಲಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಬೀಗ ಹಾಕಿ ಸುಮಾರು ಒಂದೂವರೆ ತಿಂಗಳಾಯಿತು. ಸ್ವಾಮಿ ಕೆಲಸ ಆಗಲಿಲ್ಲ ಎಂದು ಹೇಳಿದರೆ ಯಾರ ಮುಂದೆ ಹೇಳಿಕೊಳ್ಳಬೇಕು. ಕನ್ನಡ ಭವನದ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ ನಾನು ತಮ್ಮ ಮುಂದೆ ಬರುತ್ತಿದ್ದೇನೆ. ನಾನು ಕೇಳಿ ಕೇಳಿ ಸಾಕಾಗಿದೆ. . .

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಸಭಾಧ್ಯಕ್ಷರು ಮುಂದೆ ಬಂದರು)

(ಈ ಹಂತದಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದನ್ನು ರೆಕಾರ್ಡ್ ಮಾಡಲಿಲ್ಲ)

ಅಧ್ಯಕ್ಷರು : ಇಲ್ಲಾ ಇಲ್ಲಾ ತಾವು ನೀರಾವರಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಬೇಕು ನೀವು ಇಲ್ಲಿ ಬಂದು ಧರಣಿ ಕುಳಿತರೇ ಹೇಗೆ? ಹಾಗಾದರೆ ಕಾವೇರಿ ವಿಷಯ ಎಲ್ಲಾ ಬಿಟ್ಬುಬಿಡುತ್ತೀರಾ? ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಡಿ. ದೇವೆಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ಕನ್ನಡಕೋಸ್ಕರವೇ ಹೊರಾಟ ಮಾಡುವಂತಹ ಒಬ್ಬ ಹಿರಿಯ ರಾಜಕಾರಣಿ ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಅವರು ಈ ವೆಲ್‌ನಲ್ಲಿ ಬಂದು ನಿಂತುಕೊಂಡು ಮತ್ತೋಮ್ಮೆ ಪ್ರದರ್ಶನ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ನನ್ನ ಭಾವನೆ. ತಾವು ಕನ್ನಡಕೋಸ್ಕರವೇ ಹೊರಟ ಮಾಡುತ್ತೀರಿ ತಮ್ಮ ಧ್ಯೇಯ ಧೋರಣೆ ಎಲ್ಲಾ ನನಗೆ ಗೊತ್ತಿದೆ. ಆದರೆ ಒಂದೇ ಮಾತಿನಲ್ಲಿ ಹೇಳುತ್ತೇನೆ ಬಹುಶಃ ಅತ್ಯಂತ ಕಡಿಮೆ ದಿನಗಳಲ್ಲಿ ಅಕಾಡೆಮಿಗಳಿಗೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಬಾಸಗಿಯವರನ್ನು ಆಯಾಯಾ ರಂಗದಲ್ಲಿ ಕೆಲಸ ಮಾಡಿರುವವರನ್ನು ನೇಮಕ ಮಾಡುವ ನಿರ್ಣಯ ಮಾಡುತ್ತೇವೆ.

ಅಧ್ಯಕ್ಷರು : ಬೇರೆ ಮೇಂಬರ್ಸ್ ವಿಷಯ ಗೊತ್ತಿಲ್ಲದೆ ಸುಮ್ಮನೆ ಬಂದು ಅಲ್ಲಿ ಅರ್ಜಿ ಕೊಡುತ್ತಾರೆ. ನಿಮ್ಮ ಮೆಥೆಡ್ ಕರೆಕ್ಟ್ ಆಗಿದೆ ಕೆಲಸ ಮಾಡಿಸುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಸ್ವಾಮಿ, ಇಂಗ್ಲೀಷ್ ನಾಮಫಲಕಗಳಿಗೆ ಟಾರ್ ಬಳಿಯುವಾಗ ನಂಜುಂಡಸ್ವಾಮಿಯವರು ಬಂದಿದ್ದರು. ಬಾಬಾಗೌಡ ಪಾಟೀಲ್ ಬಂದಿದ್ದರು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನಾವು ಸಹ ನೀವು ಎಲ್ಲಿಗೆ ಬರಬೇಕೆಂದು ಅಂದರೂ ಕೂಡ ಬರುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ ಮೇಲೆ ಅನಗತ್ಯ ತಾನೆ.

ಅಧ್ಯಕ್ಷರು : ತಾವು ದಯವಿಟ್ಟು ಬನ್ನಿ.